





ಸಂದರ್ಭದಲ್ಲಿ ದಾರಿಯಲ್ಲಿ ವಾಹನಗಳೇ ಇರಲಿಲ್ಲ. ಆದರೆ, ಮಾಗೋಡಿಗೆ ಹೋಗುತ್ತಿದ್ದಂತೆಯೇ ಒಂದು ಗಂಟೆ ಅವಧಿಯಲ್ಲಿ 12ಕ್ಕೂ ಅಧಿಕ ಜನ ಭೇಟಿ ನೀಡಿದ್ದರು! ಅರಣ್ಯ ಇಲಾಖೆಯ ಟಿಕೆಟ್ ವಿತರಣಾ ಕೌಂಟರ್‌ನಿಂದ ಕೆಲವೇ ನಿಮಿಷಗಳ ಅಂತರದಲ್ಲಿ ನಮ್ಮ ಎದುರಿಗೇ ಜಲಪಾತ ಕಾಣಿಸಿಕೊಳ್ಳುತ್ತದೆ. ಅದರ ರೌದ್ರಾವತಾರವನ್ನು ಗಮನಿಸಿದಾಗ ಜಲಪಾತದ ಅಡಿಯಲ್ಲಿ ನಡೆಯುವುದೇ ಅಸಾಧ್ಯ ಎನಿಸುತ್ತದೆ.

ಯಲ್ಲಾಪುರಕ್ಕೆ ಬಂದರೆ ಮಾಗೋಡು ಜಲಪಾತ, ಸಾತೊಡ್ಡಿ ಜಲಪಾತ, ಶಿರ್ಲೆ ಜಲಪಾತ, ಐಜಿ ಗುಂಡಿ ಹಾಗೂ ಜೇನುಕಲ್ಲು ಗುಡ್ಡವನ್ನು ನೋಡಬಹುದು. ಪ್ರವಾಸಿ ಮನಸ್ಸುಗಳಿಗೆ ರಸದೌತಣ!

**ಸ್ಥಳ ಮಾಹಿತಿ:** ಬೆಂಗಳೂರಿನಿಂದ ಯಲ್ಲಾಪುರ–422 ಕಿ.ಮೀ. ಯಲ್ಲಾಪುರದಿಂದ ಮಾಗೋಡು ಜಲಪಾತ, ಜೇನುಕಲ್ಲು ಗುಡ್ಡ–25 ಕಿ.ಮೀ. ಯಲ್ಲಾಪುರದಿಂದ ಶಿರ್ಲೆ ಜಲಪಾತ–16 ಕಿ.ಮೀ. ಯಲ್ಲಾಪುರ ದಿಂದ ಐಜಿ ಗುಂಡಿ ಜಲಪಾತ–31 ಕಿ.ಮೀ. ಯಲ್ಲಾಪುರದಿಂದ ಸಾತೊಡ್ಡಿ ಜಲಪಾತ–34 ಕಿ.ಮೀ.